ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಮಂಗಳವಾರ, ೩೦, ಜೂನ್, ೨೦೨೬ (ಆಷಾಢ, ೦೯, ಶಕವರ್ಷ, ೧೯೪೮) BENGALURU, TUESDAY, 30, JUNE, 2026 (ASHADHA, 09, SHAKAVARSHA, 1948)	ನಂ. ೪೭೧ No. 471

GOVERNMENT OF KARNATAKA

No: RD 42 FLR 2022

Karnataka Government Secretariat
M S Building
Dr.B.R.AmbedkarVeedhi
Bengaluru, Date:30.06.2026.

NOTIFICATION

Whereas the draft of the Karnataka General Services (Survey, Settlement and Land Records Department) (Recruitment) Rules 2026, was published as required by sub-section (1) of section 3 of the Karnataka State Civil Services Act, 1978 (Karnataka Act 14 of 1990) in Notification No. RD 42 FLR 2022 Bangalore, dated: 08 June 2026, in part IV-A of Karnataka Gazette dated: 08 June 2026 inviting objections or suggestions from all persons likely to be affected thereby within 15 days from the date of its publication in the Official Gazette.

Whereas, the said Gazette was made available to the public on 08th June 2026.

And whereas the objections or suggestions received within the period specified above, have been examined by the State Government.

Now, therefore, in exercise of the powers conferred by Sub-section (1) of Section 3 read with section 8 of the Karnataka State Civil Services Act, 1978 (Karnatka Act 14 of 1990) the Government of Karnataka hereby makes the following Rules, namely:-

RULES

1. **Title and commencement. –**

(1) These rules may be called the Karnataka General Services (Survey Settlement and Land Records) (Recruitment) Rules 2026.

(2)They shall come into force from the date of their final publication in the Official Gazette.

2. **Method of recruitment and minimum qualification.** - The establishment of the Karnataka General Services (Survey Settlement and Land Records) shall consist of the categories of posts with scale of pay as specified in column (2) of the Schedule-II below, their number, the method of recruitment and minimum qualification, shall be as specified in the corresponding entries in columns (3), (4) and (5) thereof.

3. **Repeal and savings. -** The Karnataka General Services (Survey Settlement and Land Records) (Recruitment) Rules 1990 are hereby repealed:

Provided that such repeal shall not affect,-

a. the previous operation of said rules or anything duly done or any action taken there under; or

b. any right, privilege, obligation or liability acquired, accrued or incurred under the said rules.

By order and in the name of the
Governor of Karnataka,

(Rajender Kumar Kataria)
Additional Chief Secretary
Revenue Departme

SCHEDULE-I
(See rule 2)

Sl. No.	Category of Post	Number of posts			Scale of pay
		Permanent	Temporary	Total	
(1)	(2)	(3)			(4)
Part-1 (DEPUTATION CADRES)					
1	Commissioner, Survey Settlement and Land Records	1	0	1	En-cadred to I.A.S.
2	Joint Director (Administration)	1	0	1	En-cadred to K.A.S.(Senior scale) Rs.118700-3100-134200-3500-155200-4000-175200
3	Accounts Officer	1	0	1	Rs.83700-1900-85600-2300-99400-2700-115600-3100-134200-3500-155200
4	Accounts Superintendent	2	0	2	Rs.65950-1650-74200-1900-85600-2300-99400-2700-115600-3100-124900
	SUB TOTAL (1)	**5**	**0**	**5**	
Part-2 (TECHNICAL CADRE)					
1	Additional Director.	1	0	1	Rs.144700-3500-155200-4000-179200-4500-197200
2	Joint Director of Land Records.	6	0	6	Rs.118700-3100-134200-3500-155200-4000-175200
3	Deputy Director of Land Records (Executive)/ Enquiry Officer.	38	0	38	Rs.83700-1900-85600-2300-99400-2700-115600-3100-134200-3500-155200
4	Assistant Director of Land Records (Executive).	191	0	191	Rs.69250-1650-74200-1900-85600-2300-99400-2700-115600-3100-134200
5	Superintendent (Executive).	201	0	201	Rs.61300-1500-64300-1650-74200-1900-85600-2300-99400-2700-112900
6	Survey Supervisor.	683	0	683	Rs.54175-1375-58300-1500-64300-1650-74200-1900-85600-2300-99400
7	Land Surveyor	4020	0	4020	Rs.37500-900-39300-1000-43300-1125-47800-1250-52800-1375-58300-1500-64300-1650-74200-1900-76100
8	Daftar band / Process Server	47	0	47	Rs.31775-725-32500-800-35700-900-39300-1000-43300-1125-47800-1250-52800-1375-58300-1500-61300
9	Surveyor's Assistants.	1846	0	1846	Rs.27000-650-29600-725-32500-800-35700-900-39300-1000-43300-1125-46675
	SUB TOTAL (2)	**7033**	**0**	**7033**	

Part-3 (MINISTERIAL CADRE)					
1	Deputy Director (Administration)	1	0	1	Rs.83700-1900-85600-2300-99400-2700-115600-3100-134200-3500-155200
2	Assistant Director (Administration)	34	0	34	Rs.69250-1650-74200-1900-85600-2300-99400-2700-115600-3100-134200
3	Superintendent (Administration)	45	0	45	Rs.61300-1500-64300-1650-74200-1900-85600-2300-99400-2700-112900
4	First Division Assistant	108	0	108	Rs.44425-1125-47800-1250-52800-1375-58300-1500-64300-1650-74200-1900-83700
5	Stenographer	04	0	04	Rs.44425-1125-47800-1250-52800-1375-58300-1500-64300-1650-74200-1900-83700
6	Senior Data Entry Assistant	5	0	5	Rs.44425-1125-47800-1250-52800-1375-58300-1500-64300-1650-74200-1900-83700
7	Computer Assistant	1	0	1	Rs.44425-1125-47800-1250-52800-1375-58300-1500-64300-1650-74200-1900-83700
8	Senior Driver	1	0	1	Rs.44425-1125-47800-1250-52800-1375-58300-1500-64300-1650-74200-1900-83700
9	Second Division Assistant	170	0	170	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
10	Data Entry Assistant	65	0	65	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
11	Draughtsman	36	0	36	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
12	Driver	39	0	39	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
13	Office Peons	262	0	262	Rs.27000-650-29600-725-32500-800-35700-900-39300-1000-43300-1125-46675
		771	**0**	**771**	
	TOTAL (1 TO 3)	**7809**	**0**	**7809**	

SCHEDULE-II
(See rule 2)

Sl. No.	Category of Post and the scale of pay	Number of posts			Method of Recruitment	Minimum Qualification
		Perm a nent	Temp o rary	Total		
(1)	(2)	(3)			(4)	(5)
Part-1 (DEPUTATION CADRES)						
1	Commissioner for Survey Settlementand Land Records	1	0	1	En-cadred to I.A.S.	
2	Joint Director (Administration) (Rs.118700-175200)	1	0	1	By deputation of an officer in the cadre of Karnataka Administrative Service not below the rank of Senior Scale.	
3	Accounts Officer (Rs.83700-155200)	1	0	1	By deputation of an officer in the cadre of Assistant Controller or Deputy Director from the Karnataka State Audit and Accounts Department.	
4	Accounts Superintendent (Rs.65950-124900)	2	0	2	By deputation of an official in the cadre of Superintendent from the Karnataka State Audit and Accounts Department.	
SUB TOTAL (1)		**5**	**0**	**5**		

Part-2 (TECHNICAL CADRE)						
1	Additional Director. (Rs.144700-197200)	1	0	1	By promotion from the cadre of Joint Director of Land records.	Must have put in a service of not less than three years in the cadre of Joint Director of Land Records.
2	Joint Director of Land Records. (Rs.118700-175200)	6	0	6	By promotion from the cadre of Deputy Director of Land Records (Executive)/ Enquiry Officer.	Must have put in a service of not less than five years in the cadre of Deputy Director of Land Records (Executive)/Enquiry Officer: Provided that if an officer who has put in a service of not less than five years is not available, then an officer who has put in a service of not less than three years may be considered for promotion.
3	Deputy Director of Land Records (Executive)/ Enquiry Officer. (Rs.83700-155200)	38	0	38	By promotion from the cadre of Assistant Director Land Records (Executive).	1. Must possess a bachelor's degree from an University established by law. 2. Must have put in a service of not less than five years in the cadre of Assistant Director of Land Records(Executive): Provided that if an officer who has put in a service of not less than five yea rs is not available, then an officer who h as put in a service of not less than three years may be considered for promotion.
4	Assistant Director of Land Records (Executive). (Rs.69250-134200)	191	0	191	(i) Fifty percent by direct recruitment in accordance with the Karnataka State Civil Services (Direct Recruitment) (General) Rules, 2021; and	**For direct recruitment:** Must possess any Bachelor's Degree in Engineering Or any Bachelor's Degree in Technology from an University established by law; Or must possess AMIE degree in any Engineering Or Technology with an

					(ii) Fifty percent by promotion from the cadre of Superintendent (Executive).	aggregate marks of not less than 60 % and if CGPA is applicable then CGPA not less than 6.75. **For promotion:** Must have put in a service of not less than five years in the cadre of Superintendent (Executive).
5	Superintendent (Executive). (Rs.61300-112900)	201	0	201	(i) Ten percent by direct recruitment in accordance with the Karnataka State Civil Services (Direct Recruitment) (General) Rules 2021; and (ii) Ninety percent by promotion from the cadre of Survey Supervisor.	**For direct recruitment*:*** a. Must possess any Bachelor's Degree in Engineering Or any Bachelor 's Degree in Technology from an Univer sity established by law; Or must possess AMIE degree in any Engineering Or Technology OR b. BSc in Mathematics/Physics/ Com puter Science/ Information Technology / Electronics/ Geo spacial/ Geo Informatics/ Agriculture and GIS with an aggregate marks of not less than 60% from an university established by law. Or c. Diploma in Any branch of Engine ering/ Technology from an author ised Institute recognised by AICTE. **For promotion *:*** Must have put in a service of not less than five years in the cadre of Survey Supervisor.

6	Survey Supervisor. (Rs.54175-99400)	683	0	683	(i) Ten percent by direct recruitment in accordance with the Karnataka State Civil Services (Direct Recruitment) (General) Rules 2021; and (ii) Ninety percent by promotion from the cadre of Land Surveyor.	**For direct recruitment:** a. Must possess any Bachelor's Degree in Engineering Or any Bachelor's Degree in Technology from an University established by law; Or must possess AMIE degree in any Engineering Or Technology ; OR b. BSc in Mathematics/ /Physics/ Computer Science/ Information Technology / Instrumentation/ Electronics/Agriculture and Communication from an University established by law. OR c. Diploma in Any branch of Engineering/ Technology from an authorised Institute recognized by AICTE. **For promotion :** Must have put in a service of not less than five years in the cadre of Land Surveyor.
7	Land Surveyor (Rs.37500-76100)	4020	0	4020	*Hundred percent by direct recruitment* In accordance with the Karnataka State Civil Services (Direct Recruitment) (General) Rules 2021;	a. Must possess any Bachelor's Degree in Engineering Or any Bachelor's Degree in Technology from an University established by law; Or must possess AMIE degree in any Engineering Or Technology

						OR b. B.Sc. in Mathematics/ /Physics/ Computer Science/ Information Technology / Instrumentation/ Electronics and Communication/ Agriculture from an University established by law. OR c. Diploma in Any branch of Engineering/ Technology from an authorised Institute recognized by AICTE. **(2)(a)Probation:** after appointment the candidate shall be on probation of two y ears. **(b)Compulsory training**: During which period all officials shall successfully und ergo basic Survey Training at departmen t's Training Institute, for a period of six months and pass the final exam with an aggregate marks of 35% in theory and 4 0% marks in practical Exam conducted by the Institute. However unsuccessful officials shall be given one more opportu nity to appear and pass the examination within the probationary period. Probati onary period will not be declared as "Successful" if candidate fails to underg o the training and pass the examination and the provisions of the Karnataka Civi l services (Probation) Rules,1977 shall be followed with regard to the unsuccess ful officials. A candidate who fails in the Training shall be discharged from service.

8	Daftar band / Process Server (Rs.31775-61300)	47	0	47	By promotion from the cadre of Survey Assistant and Office Peons on basis of combined seniority. Seniority being determined by treating a person holding a p ost carrying a higher scale of pay as senior to a person hol ding a post carrying a lower scale of pay, seniority interse among persons holding post carrying same scale of pay being determined on the basis of length of service in the respective cadres and seniority interse among persons in the cadre being maintained.	1. Must have passed SSLC or equiva lent qualification. 2. Must have put in a service of not less than five years in the cadre of Survey Assistant or Office Peons.
9	Surveyor's Assistants. (Rs.27000-46675)	1846	0	1846	By direct recruitment in accordance with the Karnataka State Civil Services (Direct Recruitment) (General) Rules 2021.	1. Must have passed SSLC or equiva lent qualification. 2. Must be physically fit with appro priate standards with regard to vision / height /chest measureme nts etc. with no physical disabilities.
	SUB TOTAL (2)	**7033**	**0**	**7033**		
Part-3 (MINISTERIAL CADRE)						
1	Deputy Director (Administration) (Rs.83700-155200)	1	0	1	By promotion from the cadre o f Assistant Director (Administration)	1. Must possess a Bachelor's degree from an University established by law. 2. Must have put in a service of not l ess than three years in the cadre

						of Assistant Director (Administration).
2	Assistant Director (Administration) (Rs.69250-134200)	34	0	34	By promotion from the cadre of Superintendent (Administration)	Must have put in a service of not less than three years in the cadre of Superintendent (Administration).
3	Superintendent (Administration) (Rs.61300-112900)	45	0	45	By promotion from the cadre of First Division Assistant and Stenographers in the ratio of 27:1, every twenty eighth vacancy be filled by promotion from the cadre of Stenographer.	Must have put in a service of not less than five years in the cadre of First Division Assistant/ Stenographers: Provided that in the case of Stenographers they must have worked for a period of not less than one year as First Division Assistant in addition to the period of five years specified above.
4	First Division Assistant (Rs.44425-83700)	108	0	108	(i)Twenty percent by direct Recruitment in accordance with the Karnataka State Civil Services (Recruitment of the Ministerial posts) Rules 1978; (ii)Seventy percent by promotion from the cadre of Second Division Assistants; and (iii) Ten percent by promotion form the cadre of Data Entry Assistants.	**For direct recruitment.-** In accordance with the Karnataka State Civil Services (Recruitment of the Ministerial posts) Rules 1978. **For promotion*:*** Must have put in a service of not less than five years in the cadre of Second Division Assistants/ Data Entry Assistants.
5	Stenographer (Rs.44425-83700)	04	0	04	(i)Fifty percent by direct recruitment in accordance with the Karnataka Civil Services (Recruitment to	**For direct recruitment.-** In accordance with the Karnataka Civil Services (Recruitment to the post of Stenographers and Data Entry Assistants) Rules, 1983.

					the post of Stenographers and Data Entry Assistants) Rules, 1983; and (ii)Fifty percent by promotion from the cadre of Data Entry Assistants.	**For promotion:** 1. Must have passed senior grade Kannada short hand and senior grade Kannada typewriting exami nation conducted by the Departm ent of Public Instruction. 2. Must have put in a service of not less than five years in the cadre of Data Entry Assistants.
6	Senior Data Entry Assistant (Rs.44425-83700)	5	0	5	By promotion from the cadre o f Data Entry Assistants.	Must have put in a service of not less than ten years in the cadre of Data Entr y Assistants. Provided that a person in the cadre of Data entry assistant shall exercise an irrevocable option either at the time of consideration of his promotion to the cadre of Senior Data Entry Assistant or First Division Assistant or Stenographer whichever is earlier, once option is exercised it shall be irrevocable.
7	Computer Assistant (Rs.44425-83700)	1	0	1	By direct recruitment in accordance with the Karnataka Civil Services (Direct Recruitment) (General) Rules, 2021.	Must have passed Diploma in Computer Science or Information Technology from an institution recognized by the Karnataka Technical Education Board.
8	Senior Driver (Rs.44425-83700)	1	0	1	By promotion from the cadre o f driver.	Must have put in a service of not less than five years in the cadre of Drivers.
9	Second Division Assistant (Rs.34100-67600)	170	0	170	Ninety percent by direct recruitment in accordance with the Karnataka State	**For direct recruitment.-** In accordance with the Karnataka State Civil Services (Recruitment of the Ministerial posts) Rules 1978.

					Civil Services (Recruitment of the Ministerial posts) Rules 1978; and Ten percent by promotion from the cadre of Daftar band / Process server	**For promotion*:*** 1. Must have passed 2nd PUC Examination or equivalent qualification . 2. Must have put in a service of not less than five years in the cadre of Daftar band/ Process server **Note:-** Pass in pre-university course or equivalent course for qualification for promotion / transfer shall not be applicable for those who are already in service possessing SSLC qualification on the date of commencement of the Karnataka Civil Service (Recruitment to the Ministerial posts) (Amendment) Rules, 2013.
10	Data Entry Assistant (Rs.34100-67600)	65	0	65	By direct recruitment in accordance with the Karnataka Civil Services (Recruitment to the post of Stenographers and Data Entry Assistants) Rules, 1983.	--
11	Draughtsman (Rs.34100-67600)	36	0	36	By direct recruitment in accordance with the Karnataka State Civil Services (Direct Recruitment) (General) Rules 2021.	(1) Must have passed two years course in Draughtsman (Civil) conducted by the Department of Employment and Training ; and (2) Must be holder of a certificate in " Auto CAD" obtained after completing six months course conducted by an reputed

						computer training institute recognized by the Government.
12	Driver (Rs.34100-67600)	39	0	39	(i) Fifty percent by direct recruitment in accordance wit h the Karnataka State Civil Services (Direct Recruitment) (General) Rules 2021; and (ii) Fifty percent by promotion from the cadres of Daftar band /Process server/ Surveyor's Assistant/ Office peon on basis of combined seniority. Seniority being determined by treating a person holding a post carrying a higher scale of pay as senior to a person holding a post carrying a lower scale of pay, seniority interse among persons holding post carrying same scale of pay being determined on the basis of length of service in the respective cadres and seniority interse among persons in the cadre being maintained.	**For direct recruitment :-** 1. Must have passed PUC Examinati on. 2. Must be a holder of a current driving license of light and heavy motor vehicle. **For promotion :-** 1. Must have put in a service of not l ess than five years in any one or more of the cadre in Daftarband / Process Server/Surveyor's Assista nt/Office Peon. 2. Must have passed SSLC Examina tion and be holder of a current driving license of light & heavy Motor Vehicles.
13	Office Peons (Rs.27000-46675)	262	0	262	By direct recruitment in accordance with the Karnataka State Civil Services (Direct Recruitment) (General) Rules 2021.	Must have passed SSLC or equivalent qualification.
	SUB TOTAL (3)	**771**	**0**	**771**		
	TOTAL (1 TO 3)	**7809**	**0**	**7809**		

ANNEXURE
(See part-2 of Schedule- II)

1. **The Recruitment Committee to conduct direct recruitment to the cadres of "Superintendent (Executive), Survey Supervisor and Land Surveyor" shall be as follows :-**

(1)	The Commissioner / Director Department of Survey Settlement and Land Records.	Chairman
(2)	One person working in the Revenue Department of Karnataka Government Secretariat in the cadre of not below the rank of Deputy Secretary to Government to be nominated by the Principal Secretary to Government, Revenue Department.	Member
(3)	One person of the Department of Survey of India, Karnataka Region in Group-A Cadre to be nominated by the Director, Karnataka Geo Spatial Data Center, Survey of India.	Member
(4)	Two persons from the Department of the Survey Settlement and Land Records in the Group-A cadre to be nominated by the Commissioner/Director of Survey Settlement and Land Records.	Members
(5)	The Deputy Director (Administration), Department of Survey Settlement and Land Records.	Member-Secretary

2. **Intimation of vacancies**:- The appointing authority of the Department of Survey Settlement and Land Records shall determine the provisional number of direct recruitment vacancies to be filled classifying the same in accordance with the orders in force, relating to reservation of appointments or posts etc., and notify the same to the Recruitment Committee. The appointing authority may, for reasons to be recorded in writing, alter the number of vacancies to be filled up, at any time before the publication of the select list by the Recruitment Committee.
3. **Inviting application**:- The Recruitment Committee, shall take necessary steps to invite application from eligible candidates by advertising the vacancies in the Karnataka Gazette specifying the conditions of the eligibility, method of selection applicable, nature of post whether technical or non-technical, provisional number of vacancies to be filled and their classification according to reservation policy of the state. An abstract of such advertisement shall also be published in more than one widely circulated newspaper in the regional language and such other media of publication has it may deem fit.

4. **Method of selection**:-

The method of selection shall be on the basis of average total percentage of marks secured in all the papers of competitive examination conducted by the recruitment committee.

5. **List of eligible candidates**:- (1) The Recruitment Committee shall prepare a list of names of candidates eligible on the basis of merit determined in the following manner, namely :-

6. **In respect of Superintendent (Executive), Survey Supervisor and Land Surveyors:-** The Recruitment Committee shall conduct a competitive examination in the following manner, namely:-

a. The examination shall be in the form of objective multiple choice consisting of two written papers carrying 200 marks each, namely:-

Paper-1: General Paper – Covering General Knowledge of topics relating to current events, general sciences and matters of every day observation and practical knowledge as may be expected of a person who has passed the prescribed qualifying examination.

Paper-II: Specific Paper – The content of this paper shall be determined by the RecruitmentCommittee, keeping in view the nature of the job for which the selection is beingmade and the qualifying examination in consultation with the appointing authority.

(i) The papers shall be set in both Kannada and English. A candidate may answer the papers either wholly in Kannada or English but not in both.

6. **Final Selection list of candidates.-**

In respect of "Superintendent (Executive), Survey Supervisor and Land Surveyors": The Recruitment Committee shall prepare a final selection list of candidates eligible for appointment on the basis of merit determined on the basis of percentage of total marks secured in the competitive examination and taking into consideration the reservation policy of the State.

If two or more candidates secure equal marks in the competitive examination, the order of merit of such candidates shall be fixed on the basis of their age, the person older in age being placed higher in the order of the merit.

The final selection list prepared under sub-clause (1) and (2) above shall be published in the Karnataka Gazette and in such other media as the Recruitment Committee may deem fit and in such manner as the State Government may direct and copy thereof shall be sent to the appointing authority. The fact of selection shall be intimated to the candidates selected by the Recruitment Committee.

7. **Appointment of candidates:-**

The candidates, whose names are included in the select list prepared by the Recruitment Committee under clause (6) may be appointed by the appointing authority in the order in which their names appear in the select list, after satisfying itself about the suitability and physical fitness of each such candidate in accordance with the provisions of the Karnataka Civil Services (General Recruitment) Rules, 2021.

The inclusion of the name of a candidate in any select list published under sub-clause (3) of clause 6 shall not confer any right of appointment to the candidate.

If a candidate consequent upon the issue of the order of appointment, does not report for duty, the vacancy against which he was selected shall be treated as a fresh vacancy to be filled in the next or subsequent recruitment.

By order and in the name of the
Governor of Karnataka

(Rajender Kumar Kataria)
Additional Chief Secretary
Revenue Department

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 42 ಎಫ್‌ಎಲ್‌ಆರ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕಃ 30.06.2026

ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಕಾಯ್ದೆ 1978 (1990 ರ ಕರ್ನಾಟಕ ಕಾಯ್ದೆ 14) ರ 8ನೇ ಪ್ರಕರಣದ ಜೊತೆಗೆ ಓದಲಾದ 3ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಸೇವೆಗಳು (ನೇಮಕಾತಿ) ನಿಯಮಗಳು, 2026ರ ಕರಡು ನಿಯಮವನ್ನು ಬಾಧಿತರಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಅಧಿಕೃತ ಗೆಜೆಟ್‌ನಲ್ಲಿ ದಿನಾಂಕ: 08.06.2026 ರಂದು ಪ್ರಕಟಿಸಿ, ಕರ್ನಾಟಕ ರಾಜ್ಯಪತ್ರದಲ್ಲಿಪ್ರಕಟಣೆಗೊಂಡ ದಿನಾಂಕದಿಂದ 15 ದಿನಗಳ ಒಳಗಾಗಿ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಗೆಜೆಟ್ ಪ್ರತಿಯು ದಿನಾಂಕ: 8.6.2026ರಂದು ರಾಜ್ಯಪತ್ರದಲ್ಲಿ ಪ್ರಕಟಗೊಂಡಿತ್ತು.

ಮತ್ತು ಮೇಲ್ಕಂಡಂತೆ ನಿಗದಿತ ಕಾಲಾವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುತ್ತದೆ.

ಆದುದರಿಂದ, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಕಾಯ್ದೆ 1978 (1990 ರ ಕರ್ನಾಟಕ ಕಾಯ್ದೆ 14) ರ 8ನೇ ಪ್ರಕರಣದ ಜೊತೆಗೆ ಓದಲಾದ 3ನೇ ಪ್ರಕರಣದ (1) ನೇ ಉಪ ಪ್ರಕರಣದನ್ವಯ ರಾಜ್ಯ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಹೊರಡಿಸಿದೆ.

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**-

(1) ಈ ನಿಯಮಗಳನ್ನು ಕರ್ನಾಟಕ ರಾಜ್ಯ (ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಸೇವೆಗಳು) (ನೇಮಕಾತಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ಗೆಜೆಟ್‌ನಲ್ಲಿ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆಬಂದಿರುವುದಾಗಿಭಾವಿಸತಕ್ಕದ್ದು.

2. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ–
ಕರ್ನಾಟಕ ರಾಜ್ಯ (ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಸೇವೆಗಳು)ವೃಂದಗಳು, ಇದರೊಂದಿಗಿನ ಅನುಸೂಚಿ- II ರಲ್ಲಿ ನಿರ್ದಿಷ್ಟಪಡಿಸಿದಂತೆ ವೇತನ ಶ್ರೇಣಿಯ ಹುದ್ದೆಗಳ ಅಂಥ ಪ್ರವರ್ಗಗಳನ್ನುಒಳಗೊಂಡಿರತಕ್ಕದ್ದು, ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು, ಅದರ ಅಂಕಣ (3), (4) ಮತ್ತು (5) ರಲ್ಲಿನ ಸಂವಾದಿನಮೂದುಗಳಲ್ಲಿನಿರ್ದಿಷ್ಟಪಡಿಸಿರುವಂತೆಇರತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆ.- (1) ಕರ್ನಾಟಕ ರಾಜ್ಯ (ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಸೇವೆಗಳು) (ನೇಮಕಾತಿ) ನಿಯಮಗಳು, 1990 ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಅಂಥ ನಿರಸನವು;

(ಎ) ಸದರಿ ನಿಯಮಗಳ ಹಿಂದಿನ ಕಾರ್ಯಾಚರಣೆ ಅಥವಾ ಸದರಿ ನಿಯಮಗಳ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮಕ್ಕೆ: ಅಥವಾ

(ಬಿ) ಸದರಿ ನಿಯಮಗಳ ಮೇರೆಗೆ ಈಗಾಗಲೇ ಅರ್ಜಿಸಲಾದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷ ಹಕ್ಕು, ಬಾದ್ಯತೆ ಅಥವಾ ಹೊಣೆಗಾರಿಕೆಗೆಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ

ಅನುಸೂಚಿ-I
(ನಿಯಮ-2 ನ್ನು ನೋಡಿ)

ಕ್ರ.ಸಂ.	ವೃಂದವಾರು ಹುದ್ದೆಗಳು	ಹುದ್ದೆಗಳ ಸಂಖ್ಯೆ			ವೇತನ ಶ್ರೇಣಿ
		ಖಾಯಂ	ತಾತ್ಕಾಲಿಕ	ಒಟ್ಟು	
1	**2**	**3**			**4**
ಭಾಗ-1 (ನಿಯೋಜನೆ ವೃಂದಗಳು)					
1	ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ	1	0	1	ಭಾರತೀಯ ಆಡಳಿತ ಸೇವೆಗೆ ವೃಂದೀಕರಿಸಿದೆ.
2	ಜಂಟಿ ನಿರ್ದೇಶಕರು (ಆಡಳಿತ)	1	0	1	ಕರ್ನಾಟಕ ಆಡಳಿತ ಸೇವೆಗೆ ವೃಂದೀಕರಿಸಿದೆ. Rs.118700-3100-134200-3500-155200-4000-175200
3	ಲೆಕ್ಕಾಧಿಕಾರಿಗಳು	1	0	1	Rs.83700-1900-85600-2300-99400-2700-115600-3100-134200-3500-155200
4	ಲೆಕ್ಕಾಧೀಕ್ಷಕರು	2	0	2	Rs.65950-1650-74200-1900-85600-2300-99400-2700-115600-3100-124900
	ಒಟ್ಟು (1)	**5**	**0**	**5**	
ಭಾಗ-2 (ತಾಂತ್ರಿಕ ವೃಂದಗಳು)					
1	ಅಪರ ನಿರ್ದೇಶಕರು	1	0	1	Rs.144700-3500-155200-4000-179200-4500-197200
2	ಭೂದಾಖಲೆಗಳ ಜಂಟಿ ನಿರ್ದೇಶಕರು	6	0	6	Rs.118700-3100-134200-3500-155200-4000-175200
3	ಭೂದಾಖಲೆಗಳ ಉಪ ನಿರ್ದೇಶಕರು (ಕಾರ್ಯನಿರ್ವಾಹಕ) / ವಿಚಾರಣಾಧಿಕಾರಿಗಳು	38	0	38	Rs.83700-1900-85600-2300-99400-2700-115600-3100-134200-3500-155200
4	ಭೂದಾಖಲೆಗಳ ಸಹಾಯಕ ನಿರ್ದೇಶಕರು (ಕಾರ್ಯನಿರ್ವಾಹಕ)	191	0	191	Rs.69250-1650-74200-1900-85600-2300-99400-2700-115600-3100-134200
5	ಅಧೀಕ್ಷಕರು (ಕಾರ್ಯನಿರ್ವಾಹಕ)	201	0	201	Rs.61300-1500-64300-1650-74200-1900-85600-2300-99400-2700-112900
6	ಭೂಮಾಪನ ಪರ್ಯಾವೇಕ್ಷಕರು	683	0	683	Rs.54175-1375-58300-1500-64300-1650-74200-1900-85600-2300-99400
7	ಭೂಮಾಪಕರು	4020	0	4020	Rs.37500-900-39300-1000-43300-1125-47800-1250-52800-1375-58300-1500-64300-1650-74200-1900-76100

8	ದಫ್ತರ್ ಬಂದ್ / ಪ್ರೊಸಸ್ ಸರ್ವರ್	47	0	47	Rs.31775-725-32500-800-35700-900-39300-1000-43300-1125-47800-1250-52800-1375-58300-1500-61300
9	ಭೂಮಾಪನ ಸಹಾಯಕರು	1846	0	1846	Rs.27000-650-29600-725-32500-800-35700-900-39300-1000-43300-1125-46675
	ಒಟ್ಟು (2)	**7033**	**0**	**7033**	
ಭಾಗ-3 (ಆಡಳಿತ ವೃಂದಗಳು)					
1	ಉಪ ನಿರ್ದೇಶಕರು (ಆಡಳಿತ)	1	0	1	Rs.83700-1900-85600-2300-99400-2700-115600-3100-134200-3500-155200
2	ಸಹಾಯಕ ನಿರ್ದೇಶಕರು (ಆಡಳಿತ)	34	0	34	Rs.69250-1650-74200-1900-85600-2300-99400-2700-115600-3100-134200
3	ಅಧೀಕ್ಷಕರು (ಆಡಳಿತ)	45	0	45	Rs.61300-1500-64300-1650-74200-1900-85600-2300-99400-2700-112900
4	ಪ್ರಥಮ ದರ್ಜೆ ಸಹಾಯಕರು	108	0	108	Rs.44425-1125-47800-1250-52800-1375-58300-1500-64300-1650-74200-1900-83700
5	ಶೀಘ್ರಲಿಪಿಗಾರರು	04	0	04	Rs.44425-1125-47800-1250-52800-1375-58300-1500-64300-1650-74200-1900-83700
6	ಹಿರಿಯ ದತ್ತಾಂಶ ನಮೂದು ಸಹಾಯಕರು	5	0	5	Rs.44425-1125-47800-1250-52800-1375-58300-1500-64300-1650-74200-1900-83700
7	ಕಂಪ್ಯೂಟರ್ ಅಸಿಸ್ಟೆಂಟ್	1	0	1	Rs.44425-1125-47800-1250-52800-1375-58300-1500-64300-1650-74200-1900-83700
8	ಹಿರಿಯ ವಾಹನ ಚಾಲಕರು	1	0	1	Rs.44425-1125-47800-1250-52800-1375-58300-1500-64300-1650-74200-1900-83700
9	ದ್ವಿತೀಯ ದರ್ಜೆ ಸಹಾಯಕರು	170	0	170	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
10	ದತ್ತಾಂಶ ನಮೂದು ಸಹಾಯಕರು	65	0	65	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600

11	ಡ್ರಾಫ್ಟ್ ಮನ್	36	0	36	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
12	ವಾಹನ ಚಾಲಕರು	39	0	39	Rs.34100-800-35700-900-39300-1000-43300-1125-47800-1250-52800-1375-58300-1500-64300-1650-67600
13	ಕಛೇರಿ ಜವಾನರು	262	0	262	Rs.27000-650-29600-725-32500-800-35700-900-39300-1000-43300-1125-46675
	ಒಟ್ಟು (3)	**771**	**0**	**771**	
	ಒಟ್ಟಾರೆ (ಭಾಗ- 1 ರಿಂದ 3)	**7809**	**0**	**7809**	

ಅನುಸೂಚಿ-II
ನಿಯಮ-2 ನ್ನು ನೋಡಿ

ಕ್ರ. ಸಂ.	**ವೃಂದವಾರು ಹುದ್ದೆಗಳ ವಿವರ**	**ಹುದ್ದೆಗಳ ಸಂಖ್ಯೆ**			**ನೇಮಕಾತಿ ವಿಧಾನ**	**ಕನಿಷ್ಟ ವಿದ್ಯಾರ್ಹತೆ**
		ಖಾಯಂ	**ತಾತ್ಕಾಲಿಕ**	**ಒಟ್ಟು**		
1	**2**	**3**			**4**	**5**
ಭಾಗ-1 (ನಿಯೋಜನೆ ವೃಂದಗಳು)						
1	ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ	1	0	1	ಭಾರತೀಯ ಆಡಳಿತ ಸೇವೆಗೆ ವೃಂದೀಕರಿಸಿದೆ.	
2	ಜಂಟಿ ನಿರ್ದೇಶಕರು (ಆಡಳಿತ) (Rs.118700-175200)	1	0	1	ಕರ್ನಾಟಕ ಆಡಳಿತ ಸೇವೆಯ ವೃಂದದಲ್ಲಿನ ಹಿರಿಯ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯನ್ನು ನಿಯೋಜನೆ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.	
3	ಲೆಕ್ಕಾಧಿಕಾರಿಗಳು (Rs.83700-155200)	1	0	1	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು	

ಕ್ರ. ಸಂ.	ವೃಂದವಾರು ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ			ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ	ಒಟ್ಟು		
1	2	3			4	5
					ಲೆಕ್ಕಪತ್ರ ಇಲಾಖೆಯಿಂದ ಸಹಾಯಕ ನಿಯಂತ್ರಕರು ಅಥವಾ ಉಪ ನಿರ್ದೇಶಕರ ವೃಂದದ ಅಧಿಕಾರಿಯನ್ನು ನಿಯೋಜನೆ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.	
4	ಲೆಕ್ಕಾಧೀಕ್ಷಕರು (Rs.65950-124900)	2	0	2	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಅಧೀಕ್ಷಕರು ವೃಂದದಲ್ಲಿರುವ ಅಧಿಕಾರಿಯನ್ನು ನಿಯೋಜನೆ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.	
	ಒಟ್ಟು (1)	**5**	**0**	**5**		
ಭಾಗ-2 ತಾಂತ್ರಿಕ ವೃಂದಗಳು						
1	ಅಪರ ನಿರ್ದೇಶಕರು (Rs.144700-197200)	1	0	1	ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.	ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆ ಇರದಂತೆ ಸೇವೆ ಸಲ್ಲಿಸಿರಬೇಕು.
2	ಭೂದಾಖಲೆಗಳ ಜಂಟಿ ನಿರ್ದೇಶಕರು (Rs.118700-175200)	6	0	6	ಭೂದಾಖಲೆಗಳ ಉಪ ನಿರ್ದೇಶಕರು (ಕಾರ್ಯನಿರ್ವಾಹಕ) / ವಿಚಾರಣಾಧಿಕಾರಿ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.	ಭೂದಾಖಲೆಗಳ ಉಪ ನಿರ್ದೇಶಕರು (ಕಾರ್ಯನಿರ್ವಾಹಕ) /ವಿಚಾರಣಾಧಿಕಾರಿ ಹುದ್ದೆಯಲ್ಲಿ ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು; ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದರೆ, ಕನಿಷ್ಠ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆ ಸಲ್ಲಿಸಿದ ಅಧಿಕಾರಿಯನ್ನು ಮುಂಬಡ್ತಿಗೆ ಪರಿಗಣಿಸತಕ್ಕದ್ದು.

ಕ್ರ. ಸಂ.	ವೃಂದವಾರು ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ			ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ	ಒಟ್ಟು		
1	2	3			4	5
3	ಭೂದಾಖಲೆಗಳ ಉಪ ನಿರ್ದೇಶಕರು (ಕಾರ್ಯನಿರ್ವಾಹಕ)/ ವಿಚಾರಣಾಧಿಕಾರಿಗಳು (Rs.83700-155200)	38	0	38	ಭೂದಾಖಲೆಗಳ ಸಹಾಯಕ ನಿರ್ದೇಶಕರು (ಕಾರ್ಯನಿರ್ವಾಹಕ) ಹುದ್ದೆಯಿಂದ ಮುಂಬಡ್ತಿ ಪಡೆಯುವ ಮೂಲಕ.	(1) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. (2) ಭೂದಾಖಲೆಗಳ ಸಹಾಯಕ ನಿರ್ದೇಶಕರ (ಕಾರ್ಯನಿರ್ವಾಹಕ) ವೃಂದದಲ್ಲಿ ಕನಿಷ್ಟ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು; ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆ ಸಲ್ಲಿಸಿದ ಅಧಿಕಾರಿ ಲಭ್ಯವಿಲ್ಲದಿದ್ದರೆ, ಕನಿಷ್ಠ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆ ಸಲ್ಲಿಸಿದ ಅಧಿಕಾರಿಯನ್ನು ಮುಂಬಡ್ತಿಗೆ ಪರಿಗಣಿಸಬಹುದು.
4	ಭೂದಾಖಲೆಗಳ ಸಹಾಯಕ ನಿರ್ದೇಶಕರು (ಕಾರ್ಯನಿರ್ವಾಹಕ) (Rs.69250-134200)	191	0	191	(i) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ಶೇಕಡ 50 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು. **ಮತ್ತು** (ii) ಅಧೀಕ್ಷಕರು (ಕಾರ್ಯ ನಿರ್ವಾಹಕ) ವೃಂದದಿಂದ ಶೇಕಡ 50 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್‌ನಲ್ಲಿ ಯಾವುದೇ ಪದವಿ ಅಥವಾ ತಂತ್ರಜ್ಞಾನದಲ್ಲಿ ಯಾವುದೇ ಪದವಿ ಹೊಂದಿರಬೇಕು; ಅಥವಾ ಯಾವುದೇ ಎಂಜಿನಿಯರಿಂಗ್ ಅಥವಾ ತಂತ್ರಜ್ಞಾನದಲ್ಲಿ ಎ.ಎಂ.ಐ.ಇ. ಪದವಿಯನ್ನು ಕನಿಷ್ಠ ಶೇಕಡ 60 ಅಂಕಗಳೊಂದಿಗೆ ಹೊಂದಿರಬೇಕು ಮತ್ತು ಸಿ.ಜಿ.ಪಿ.ಎ ಅನ್ವಯವಾಗಿದ್ದಲ್ಲಿ, ಸಿ.ಜಿ.ಪಿ.ಎ 6.75 ಕ್ಕಿಂತ ಕಡಿಮೆಯಿರಬಾರದು. **ಮುಂಬಡ್ತಿಗಾಗಿ:** ಅಧೀಕ್ಷಕರು (ಕಾರ್ಯ ನಿರ್ವಾಹಕ) ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.

ಕ್ರ. ಸಂ.	ವೃಂದವಾರು ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ			ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ	ಒಟ್ಟು		
1	2	3			4	5
5	ಅಧೀಕ್ಷಕರು (ಕಾರ್ಯನಿರ್ವಾಹಕ) (Rs.61300-112900)	201	0	201	(i) ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ಶೇಕಡ 10 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು. **ಮತ್ತು** (ii) ಭೂಮಾಪನ ಪರ್ಯಾವೇಕ್ಷಕರ ವೃಂದದಿಂದ ಶೇಕಡ 90 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** (ಎ) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್‌ನಲ್ಲಿ ಯಾವುದೇ ಪದವಿ ಅಥವಾ ತಂತ್ರಜ್ಞಾನದಲ್ಲಿ ಯಾವುದೇ ಪದವಿ ಹೊಂದಿರಬೇಕು; ಅಥವಾ ಯಾವುದೇ ಎಂಜಿನಿಯರಿಂಗ್ ಅಥವಾ ತಂತ್ರಜ್ಞಾನದಲ್ಲಿ ಎ.ಎಂ.ಐ.ಇ. ಪದವಿಯನ್ನು ಹೊಂದಿರಬೇಕು **ಅಥವಾ** (ಬಿ) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡ 60 ಅಂಕಗಳಿಗೆ ಕಡಿಮೆ ಇಲ್ಲದಂತೆ ಗಣಿತ/ ಭೌತಶಾಸ್ತ್ರ/ ಕಂಪ್ಯೂಟರ್ ಸೈನ್ಸ್/ ಮಾಹಿತಿ ತಂತ್ರಜ್ಞಾನ/ ಎಲೆಕ್ಟ್ರಾನಿಕ್ಸ್/ ಜಿಯೋ ಸ್ಪೆಷಲ್/ ಜಿಯೋ ಇನ್ಫರ್ಮ್ಯಾಟಿಕ್ಸ್/ ಕೃಷಿ ಮತ್ತು ಜಿ.ಐ.ಎಸ್. ನಲ್ಲಿ ಬಿ.ಎಸ್.ಸಿ. ಪದವಿ ಪಡೆದಿರತಕ್ಕದ್ದು. (ಸಿ) ಎ.ಐ.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಯಿಂದ ಎಂಜಿನಿಯರಿಂಗ್ / ತಂತ್ರಜ್ಞಾನದ ಯಾವುದೇ ವಿಭಾಗದಲ್ಲಿ ಡಿಪ್ಲೊಮಾ ಪಡೆದಿರತಕ್ಕದ್ದು. **ಮುಂಬಡ್ತಿಗಾಗಿ:** ಭೂಮಾಪನ ಪರ್ಯಾವೇಕ್ಷಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.

ಕ್ರ. ಸಂ.	ವೃಂದವಾರು ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ			ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ	ಒಟ್ಟು		
1	2	3			4	5
6	ಭೂಮಾಪನ ಪರ್ಯಾವೇಕ್ಷಕರು (Rs.54175-99400)	683	0	683	(i) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ಶೇಕಡ 10 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು: **ಮತ್ತು** (ii) ಭೂಮಾಪಕರ ವೃಂದದಿಂದ ಶೇಕಡ 90 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** (ಎ) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್‌ನಲ್ಲಿ ಅಥವಾ ತಂತ್ರಜ್ಞಾನದಲ್ಲಿ ಯಾವುದೇ ಪದವಿ ಹೊಂದಿರಬೇಕು; ಅಥವಾ ಯಾವುದೇ ಎಂಜಿನಿಯರಿಂಗ್ ಅಥವಾ ತಂತ್ರಜ್ಞಾನದಲ್ಲಿ ಎ.ಎಂ.ಐ.ಇ. ಪದವಿಯನ್ನು ಹೊಂದಿರಬೇಕು ಅಥವಾ (ಬಿ) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಗಣಿತ/ ಭೌತಶಾಸ್ತ್ರ/ ಕಂಪ್ಯೂಟರ್ ಸೈನ್ಸ್/ ಮಾಹಿತಿ ತಂತ್ರಜ್ಞಾನ/ ಇನ್ಸ್ಟ್ರುಮೆಂಟೇಶನ್/ ಎಲೆಕ್ಟ್ರಾನಿಕ್ಸ್/ ಕೃಷಿ ಮತ್ತು ಕಮ್ಯುನಿಕೇಶನ್‌ನಲ್ಲಿ ಬಿ.ಎಸ್.ಸಿ. ಪದವಿ ಪಡೆದಿರತಕ್ಕದ್ದು. (ಸಿ) ಎ.ಐ.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಯಿಂದ ಎಂಜಿನಿಯರಿಂಗ್ / ತಂತ್ರಜ್ಞಾನದ ಯಾವುದೇ ವಿಭಾಗದಲ್ಲಿ ಡಿಪ್ಲೊಮಾ ಪಡೆದಿರತಕ್ಕದ್ದು. **ಮುಂಬಡ್ತಿಗಾಗಿ:** ಭೂಮಾಪಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.

7	ಭೂಮಾಪಕರು (Rs.37500-76100)	4020	0	4020	ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ಶೇಕಡ 100 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು;	(1) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್‌ನಲ್ಲಿ ಅಥವಾ ತಂತ್ರಜ್ಞಾನದಲ್ಲಿ ಯಾವುದೇ ಪದವಿ ಹೊಂದಿರಬೇಕು; ಅಥವಾ ಯಾವುದೇ ಎಂಜಿನಿಯರಿಂಗ್ ಅಥವಾ ತಂತ್ರಜ್ಞಾನದಲ್ಲಿ ಎ.ಎಂ.ಐ.ಇ. ಪದವಿ ಹೊಂದಿರಬೇಕು; **ಅಥವಾ** (ಬಿ) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಗಣಿತ/ ಭೌತಶಾಸ್ತ್ರ/ ಕಂಪ್ಯೂಟರ್ ಸೈನ್ಸ್/ ಮಾಹಿತಿ ತಂತ್ರಜ್ಞಾನ/ ಇನ್ಸ್ಟ್ರುಮೆಂಟೇಶನ್/ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್/ ಕೃಷಿ ಬಿ.ಎಸ್.ಸಿ. ಪದವಿ ಪಡೆದಿರತಕ್ಕದ್ದು; **ಅಥವಾ** (ಸಿ) ಎ.ಐ.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಯಿಂದ ಎಂಜಿನಿಯರಿಂಗ್ / ತಂತ್ರಜ್ಞಾನದ ಯಾವುದೇ ವಿಭಾಗದಲ್ಲಿ ಡಿಪ್ಲೊಮಾ ಪಡೆದಿರತಕ್ಕದ್ದು. **(2)(ಎ) ಖಾಯಂ ಪೂರ್ವಾವಧಿ:** ನೇಮಕಾತಿಯ ನಂತರ ಅಭ್ಯರ್ಥಿಯು ಎರಡು ವರ್ಷಗಳ ಖಾಯಂ ಪೂರ್ವಾವಧಿಯಲ್ಲಿರುತ್ತಾರೆ. **(ಬಿ) ಕಡ್ಡಾಯ ತರಬೇತಿ:** ಈ ಅವಧಿಯಲ್ಲಿ ಎಲ್ಲಾ ಭೂಮಾಪಕರು ಇಲಾಖೆಯ ಭೂಮಾಪನಾ ತರಬೇತಿ ಸಂಸ್ಥೆಯಲ್ಲಿ ಆರು ತಿಂಗಳ ಅವಧಿಗೆ ವೃತ್ತಿ ಬುನಾದಿ ಭೂಮಾಪನ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಬೇಕು ಮತ್ತು ಸಂಸ್ಥೆಯು ನಡೆಸುವ ಸೈದ್ಧಾಂತಿಕ ಪರೀಕ್ಷೆಯಲ್ಲಿ 35% ಮತ್ತು ಪ್ರಾಯೋಗಿಕ

						ಪರೀಕ್ಷೆಯಲ್ಲಿ 40% ಅಂಕಗಳೊಂದಿಗೆ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಆದಾಗ್ಯೂ, ವಿಫಲರಾದ ಭೂಮಾಪಕರಿಗೆ ಖಾಯಂ ಪೂರ್ವಾವಧಿಯೊಳಗೆ ಪರೀಕ್ಷೆಗೆ ಹಾಜರಾಗಲು ಮತ್ತು ಉತ್ತೀರ್ಣರಾಗಲು ಇನ್ನೊಂದು ಅವಕಾಶವನ್ನು ನೀಡಲಾಗುವುದು. ನೌಕರರು ತರಬೇತಿಯಲ್ಲಿ ಉತ್ತೀರ್ಣರಾಗಲು ವಿಫಲವಾದರೆ, ಆ ನೌಕರರುಗಳ ಖಾಯಂ ಪೂರ್ವಾವಧಿಯನ್ನು "ಯಶಸ್ವಿ" ಎಂದು ಘೋಷಿಸಲಾಗುವುದಿಲ್ಲ ಮತ್ತು ವಿಫಲ ನೌಕರರಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವೆಗಳ (ಪ್ರೊಬೇಷನರಿ) ನಿಯಮಗಳು, 1977 ರ ನಿಬಂಧನೆಗಳು ಅನ್ವಯಿಸಲಾಗುತ್ತದೆ. ತರಬೇತಿಯಲ್ಲಿ ಅನುತ್ತೀರ್ಣರಾದ ನೌಕರರನ್ನು ಸೇವೆಯಿಂದ ತೆಗೆದುಹಾಕಲಾಗುತ್ತದೆ.
8	ದಫ್ತರ್ ಬಂದ್ / ಪ್ರೊಸಸ್ ಸರ್ವರ್ (Rs.31775-61300)	47	0	47	ಭೂಮಾಪನ ಸಹಾಯಕರು ಮತ್ತು ಕಚೇರಿ ಜವಾನರುಗಳ ವೃಂದದ ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. ಹೆಚ್ಚಿನ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯಲ್ಲಿನ ನೌಕರರನ್ನು ಕಡಿಮೆ ವೇತನ ಶ್ರೇಣಿಯನ್ನು ಹೊಂದಿರುವ ನೌಕರರಿಗಿಂತ ಹಿರಿಯ ಎಂದು ನಿರ್ಧರಿಸಲಾಗುವುದು, ಇದರಲ್ಲಿ ಸದರಿ ಹುದ್ದೆಗೆ ನಿರ್ವಹಿಸಲಾಗಿರುವ ಜೇಷ್ಟತೆಯಲ್ಲಿ ಸಮಾನ ವೇತನ ಶ್ರೇಣಿಯನ್ನು ಹೊಂದಿರುವ ನೌಕರರ ಜ್ಯೇಷ್ಠತೆಯನ್ನು ಆಯಾ ವೃಂದಗಳಲ್ಲಿನ ಸೇವಾ ಅವಧಿಯ ಆಧಾರದ ಮೇಲೆ ನಿರ್ಧರಿಸಲಾಗುವುದು,	(1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು. (2) ಕಛೇರಿ ಜವಾನರು/ಭೂಮಾಪನ ಸಹಾಯಕರು ಕೇಡರ್‌ನಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.

9	ಭೂಮಾಪನ ಸಹಾಯಕರು (Rs.27000-46675)	1846	0	1846	ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ನೇರ ನೇಮಕಾತಿ ಮೂಲಕ.	(1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು. (2) ಯಾವುದೇ ದೈಹಿಕ ನ್ಯೂನತೆಗಳಿಲ್ಲದೆ ದೃಷ್ಟಿ / ಎತ್ತರ / ಎದೆಯ ಅಳತೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸೂಕ್ತ ಮಾನದಂಡಗಳೊಂದಿಗೆ ದೈಹಿಕವಾಗಿ ಸದೃಢರಾಗಿರಬೇಕು.
	ಒಟ್ಟು (2)	**7033**	**0**	**7033**		
				ಭಾಗ-3 ಆಡಳಿತ ವೃಂದಗಳು		
1	ಉಪ ನಿರ್ದೇಶಕರು (ಆಡಳಿತ) (Rs.83700-155200)	1	0	1	ಸಹಾಯಕ ನಿರ್ದೇಶಕ (ಆಡಳಿತ) ಹುದ್ದೆಯಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	(1) ಕಾನೂನಿನಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರತಕ್ಕದ್ದು. (2) ಸಹಾಯಕ ನಿರ್ದೇಶಕರು (ಆಡಳಿತ) ವೃಂದದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.
2	ಸಹಾಯಕ ನಿರ್ದೇಶಕರು (ಆಡಳಿತ) (Rs.69250-134200)	34	0	34	ಅಧೀಕ್ಷಕರು (ಆಡಳಿತ) ಹುದ್ದೆಯಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	ಅಧೀಕ್ಷಕರು (ಆಡಳಿತ) ವೃಂದದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರತಕ್ಕದ್ದು.
3	ಅಧೀಕ್ಷಕರು (ಆಡಳಿತ) (Rs.61300-112900)	45	0	45	ಪ್ರಥಮ ದರ್ಜೆ ಸಹಾಯಕ ಮತ್ತು ಶೀಘ್ರಲಿಪಿಗಾರರ ವೃಂದದಿಂದ 27:1ರ ಅನುಪಾತದಲ್ಲಿ ಬಡ್ತಿ ನೀಡುವ ಮೂಲಕ, ಪ್ರತಿ ಇಪ್ಪತ್ತೆಂಟನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡತಕ್ಕದ್ದು.	ಪ್ರಥಮ ದರ್ಜೆ ಸಹಾಯಕ/ ಶೀಘ್ರಲಿಪಿಗಾರರ ವೃಂದದಲ್ಲಿ ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿರತಕ್ಕದ್ದು: ಆದರೆ, ಶೀಘ್ರಲಿಪಿಗಾರರ ಸಂದರ್ಭದಲ್ಲಿ, ಮೇಲೆ ನಿರ್ದಿಷ್ಟಪಡಿಸಿದ ಐದು ವರ್ಷಗಳ ಅವಧಿಯ ಜೊತೆಗೆ, ಪ್ರಥಮ ದರ್ಜೆ ಸಹಾಯಕರಾಗಿ ಕನಿಷ್ಠ ಒಂದು ವರ್ಷ ಕೆಲಸ ಮಾಡಿರತಕ್ಕದ್ದು.
4	ಪ್ರಥಮ ದರ್ಜೆ ಸಹಾಯಕರು (Rs.44425-83700)	108	0	108	(i) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978 ರ	**ನೇರ ನೇಮಕಾತಿಗಾಗಿ:** ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978 ರ ಅನುಸಾರ.

					ಪ್ರಕಾರ ಶೇಕಡ 20ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು; (ii) ದ್ವಿತೀಯ ದರ್ಜೆಯ ಸಹಾಯಕರ ವೃಂದದಿಂದ ಶೇಕಡ 70ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು; **ಮತ್ತು** (iii) ದತ್ತಾಂಶ ನಮೂದು ಸಹಾಯಕರ ವೃಂದದಿಂದ ಶೇಕಡ 10ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ಮುಂಬಡ್ತಿಗಾಗಿ:** ದ್ವಿತೀಯ ದರ್ಜೆ ಸಹಾಯಕರು / ದತ್ತಾಂಶ ನಮೂದು ಸಹಾಯಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.
5	ಶೀಘ್ರಲಿಪಿಗಾರರು (Rs.44425-83700)	04	0	04	(i) ಕರ್ನಾಟಕ ನಾಗರಿಕ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಾತಿ) ನಿಯಮಗಳು, 1983 ರ ಪ್ರಕಾರ ಶೇಕಡ 50ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು; ಮತ್ತು (ii) ದತ್ತಾಂಶ ನಮೂದು ಸಹಾಯಕರ ವೃಂದದಿಂದ ಶೇಕಡ 50ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** ಕರ್ನಾಟಕ ನಾಗರೀಕ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಾತಿ) ನಿಯಮಗಳು, 1983 ರ ಅನುಸಾರ. **ಮುಂಬಡ್ತಿಗಾಗಿ:** (1) ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆಸಲಾದ ಹಿರಿಯ ಶ್ರೇಣಿ ಕನ್ನಡ ಶೀಘ್ರಲಿಪಿ ಮತ್ತು ಹಿರಿಯ ಶ್ರೇಣಿ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (2) ದತ್ತಾಂಶ ನಮೂದು ಸಹಾಯಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.
6	ಹಿರಿಯ ದತ್ತಾಂಶ ನಮೂದು ಸಹಾಯಕರು (Rs.44425-83700)	5	0	5	ದತ್ತಾಂಶ ನಮೂದು ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.	ದತ್ತಾಂಶ ನಮೂದು ಸಹಾಯಕರ ವೃಂದದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು. ಪರಂತು, ದತ್ತಾಂಶ ನಮೂದು ಸಹಾಯಕರು ಮುಂಬಡ್ತಿ ಪರಿಗಣನಾ ಸಂದರ್ಭದಲ್ಲಿ ಹಿರಿಯ ದತ್ತಾಂಶ ನಮೂದು ಸಹಾಯಕರು ಅಥವಾ ಪ್ರಥಮ ದರ್ಜೆ ಸಹಾಯಕರು ಅಥವಾ ಶೀಘ್ರಲಿಪಿಗಾರರ ಹುದ್ದೆಗಳಲ್ಲಿ ಯಾವ ಹುದ್ದೆಗೆ ಮುಂಬಡ್ತಿ ಮೊದಲು ಆಗುತ್ತದೋ ಅಂತಹ ಸಂದರ್ಭದಲ್ಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಹಿಂಪಡೆಯಲಾಗದ

						ಅಭಿಮತವನ್ನು ಸಲ್ಲಿಸತಕ್ಕದ್ದು. ಒಮ್ಮೆ ಸಲ್ಲಿಸಿದ ಅಭಿಮತವನ್ನು ಹಿಂಪಡೆಯತಕ್ಕದ್ದಲ್ಲ.
7	ಕಂಪ್ಯೂಟರ್ ಅಸಿಸ್ಟೆಂಟ್ (Rs.44425-83700)	1	0	1	ಕರ್ನಾಟಕ ನಾಗರಿಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.	ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ವಿಜ್ಞಾನ ಅಥವಾ ಮಾಹಿತಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಪಡೆದಿರತಕ್ಕದ್ದು.
8	ಹಿರಿಯ ವಾಹನ ಚಾಲಕರು (Rs.44425-83700)	1	0	1	ಚಾಲಕರ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.	ಚಾಲಕರ ವೃಂದದಲ್ಲಿ ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿರತಕ್ಕದ್ದು.
9	ದ್ವಿತೀಯ ದರ್ಜೆ ಸಹಾಯಕರು (Rs.34100-67600)	170	0	170	ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978 ರ ಪ್ರಕಾರ ಶೇಕಡ 90ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು; **ಮತ್ತು** ದಫ್ತರ್ ಬಂದ್ / ಪ್ರೊಸಸ್ ಸರ್ವರ್ ವೃಂದದಿಂದ ಶೇಕಡ 10ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978 ರ ಪ್ರಕಾರ. **ಮುಂಬಡ್ತಿಗಾಗಿ:** (1) ದ್ವಿತೀಯ ಪಿ.ಯು.ಸಿ ಪರೀಕ್ಷೆ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. (2) ದಫ್ತರ್ ಬಂದ್ / ಪ್ರೊಸಸ್ ಸರ್ವರ್ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಹೊಂದಿರತಕ್ಕದ್ದು. **ಟಿಪ್ಪಣಿ:-** ಕರ್ನಾಟಕ ನಾಗರೀಕ ಸೇವೆ (ಲಿಪಿಕ ಹುದ್ದೆಗಳಿಗೆ ನೇಮಕಾತಿ) (ತಿದ್ದುಪಡಿ) ನಿಯಮಗಳು, 2013ರ ಪ್ರಾರಂಭದ ದಿನಾಂಕದಂದು ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ಹೊಂದಿ ಈಗಾಗಲೇ ಸೇವೆಯಲ್ಲಿರುವವರಿಗೆ ಮುಂಬಡ್ತಿ/ ವರ್ಗಾವಣೆಗೆ ಅರ್ಹತೆಗಾಗಿ ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ಕೋರ್ಸನ್ನು ತೇರ್ಗಡೆ ಹೊಂದಿರಬೇಕೆಂದು ನಿಗದಿಪಡಿಸಿದ ವಿದ್ಯಾರ್ಹತೆಯು ಅನ್ವಯಿಸತಕ್ಕದ್ದಲ್ಲ.
10	ದತ್ತಾಂಶ ನಮೂದು ಸಹಾಯಕರು (Rs.34100-67600)	65	0	65	ಕರ್ನಾಟಕ ನಾಗರೀಕ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಾತಿ) ನಿಯಮಗಳು, 1983 ರ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.	--

11	ಡ್ರಾಫ್ಟ್ಸ್ ಮನ್ (Rs.34100-67600)	36	0	36	ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.	(1) ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನಡೆಸಲ್ಪಡುವ ಡ್ರಾಫ್ಟ್ಸ್‌ಮನ್ (ಸಿವಿಲ್) ಎರಡು ವರ್ಷಗಳ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರತಕ್ಕದ್ದು; **ಮತ್ತು** (2) ಸರ್ಕಾರದಿಂದ ಗುರುತಿಸಲ್ಪಟ್ಟ ಪ್ರತಿಷ್ಠಿತ ಕಂಪ್ಯೂಟರ್ ತರಬೇತಿ ಸಂಸ್ಥೆಯಿಂದ ನಡೆಸಲ್ಪಡುವ ಆರು ತಿಂಗಳ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಪಡೆದ "ಆಟೋ ಕ್ಯಾಡ್" ನಲ್ಲಿ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು.
12	ವಾಹನ ಚಾಲಕರು (Rs.34100-67600)	39	0	39	(i) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ಶೇಕಡ 50 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು; **ಮತ್ತು** (ii) ದಫ್ತರ್ ಬಂದ್ / ಪ್ರೊಸಸ್ ಸರ್ವರ್ / ಭೂಮಾಪನ ಸಹಾಯಕ / ಕಛೇರಿ ಜವಾನರ ವೃಂದಗಳಿಂದ ಸಂಯೋಜಿತ ಜೇಷ್ಟತೆಯ ಆಧಾರದ ಮೇಲೆ ಶೇಕಡ 50 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. ಹೆಚ್ಚಿನ ವೇತನ ಶ್ರೇಣಿಯನ್ನು ಹೊಂದಿರುವ ಹುದ್ದೆಯಲ್ಲಿನ ನೌಕರರನ್ನು ಕಡಿಮೆ ವೇತನ ಶ್ರೇಣಿಯನ್ನು ಹೊಂದಿರುವ ನೌಕರರಿಗಿಂತ ಹಿರಿಯ ಎಂದು ನಿರ್ದರಿಸಲಾಗವುದು, ಇದರಲ್ಲಿ ಸದರಿ ಹುದ್ದೆಗೆ ನಿರ್ವಹಿಸಲಾಗಿರುವ ಜೇಷ್ಟತೆಯಲ್ಲಿ ಸಮಾನ ವೇತನ ಶ್ರೇಣಿಯನ್ನು ಹೊಂದಿರುವ ನೌಕರರ ಜ್ಯೇಷ್ಠತೆಯನ್ನು ಆಯಾ ವೃಂದಗಳಲ್ಲಿನ ಸೇವಾ ಅವಧಿಯ ಆಧಾರದ ಮೇಲೆ ನಿರ್ಧರಿಸಲಾಗುವುದು,	**ನೇರ ನೇಮಕಾತಿಗಾಗಿ** :- (1) ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (2) ಪ್ರಸ್ತುತ ಚಾಲ್ತಿಯಲ್ಲಿರುವ ಲಘು ಮತ್ತು ಭಾರೀ ಮೋಟಾರು ವಾಹನ ಚಾಲನಾ ಪರವಾನಗಿಯನ್ನು ಹೊಂದಿರತಕ್ಕದ್ದು. **ಮುಂಬಡ್ತಿಗಾಗಿ** :- (1) ದಫ್ತರ್ ಬಂದ್ / ಪ್ರೊಸಸ್ ಸರ್ವರ್ / ಭೂಮಾಪನ ಸಹಾಯಕ / ಕಛೇರಿ ಜವಾನರ ವೃಂದದಲ್ಲಿ ಯಾವುದೇ ಒಂದು ಅಥವಾ ಹೆಚ್ಚಿನ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು. (2) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಲಘು ಮತ್ತು ಭಾರೀ ಮೋಟಾರು ವಾಹನ ಚಾಲನಾ ಪರವಾನಗಿಯನ್ನು ಹೊಂದಿರತಕ್ಕದ್ದು.
13	ಕಛೇರಿ ಜವಾನರು (Rs.27000-46675)	262	0	262	ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ರ ಪ್ರಕಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.	ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.
	ಒಟ್ಟು (3)	**771**	**0**	**771**		
	ಒಟ್ಟಾರೆ (1 ರಿಂದ 3)	**7809**	**0**	**7809**		

ಅನುಬಂಧ

(ಅನುಬಂಧ- II ರ ಭಾಗ-2 ನೋಡಿ)

1. **"ಅಧೀಕ್ಷಕರು (ಕಾರ್ಯನಿರ್ವಾಹಕ), ಭೂಮಾಪನ ಪರ್ಯಾವೇಕ್ಷಕರು ಮತ್ತು ಭೂಮಾಪಕರು" ವೃಂದಗಳಿಗೆ ನೇರ ನೇಮಕಾತಿ ನಡೆಸುವ ನೇಮಕಾತಿ ಸಮಿತಿಯು ಈ ಕೆಳಗಿನಂತಿರುತ್ತದೆ:-**

(1) ಆಯುಕ್ತರು / ನಿರ್ದೇಶಕರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ.	ಅಧ್ಯಕ್ಷರು
(2) ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಸಚಿವಾಲಯದ ಉಪ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಿಲ್ಲದ ದರ್ಜೆಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ವ್ಯಕ್ತಿಯನ್ನು ಸರ್ಕಾರದ ಅಪರ / ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಂದ ನಾಮನಿರ್ದೇಶನ ಮಾಡಿರತಕ್ಕದ್ದು.	ಸದ್ಯಸರು
(3) ಕರ್ನಾಟಕ ಪ್ರದೇಶದ ಸರ್ವೇ ಆಫ್ ಇಂಡಿಯಾ ಇಲಾಖೆಯ ಗ್ರೂಪ್-ಎ ವೃಂದದ ಒಬ್ಬ ವ್ಯಕ್ತಿಯನ್ನು ಕರ್ನಾಟಕ ಭೂ ಪ್ರಾದೇಶಿಕ ದತ್ತಾಂಶ ಕೇಂದ್ರದ ನಿರ್ದೇಶಕರು, ಸರ್ವೇ ಆಫ್ ಇಂಡಿಯಾ ಇಲಾಖೆ ಇವರಿಂದ ನಾಮನಿರ್ದೇಶನ ಮಾಡಿರತಕ್ಕದ್ದು.	ಸದಸ್ಯರು
(4) ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಗ್ರೂಪ್-ಎ ವೃಂದದಲ್ಲಿರುವ ಇಬ್ಬರು ವ್ಯಕ್ತಿಗಳನ್ನುಆಯುಕ್ತರು/ನಿರ್ದೇಶಕರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳಇಲಾಖೆ ಇವರಿಂದ ನಾಮನಿರ್ದೇಶನ ಮಾಡಿರತಕ್ಕದ್ದು.	ಸದಸ್ಯರು
(5) ಉಪ ನಿರ್ದೇಶಕರು (ಆಡಳಿತ), ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ.	"ಸದಸ್ಯರು-ಕಾರ್ಯದರ್ಶಿ"

2. **ಖಾಲಿ ಹುದ್ದೆಗಳ ಮಾಹಿತಿ:-**ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ನೇಮಕಾತಿ ಪ್ರಾಧಿಕಾರವು, ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳಿಗೆ ಅನುಗುಣವಾಗಿ ವರ್ಗೀಕರಿಸಿ ನೇರ ನೇಮಕಾತಿಯಿಂದ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ತಾತ್ಕಾಲಿಕ ಸಂಖ್ಯೆಯನ್ನು ನಿರ್ಧರಿಸಬೇಕು ಮತ್ತು ಅದನ್ನು ನೇಮಕಾತಿ ಸಮಿತಿಗೆ ತಿಳಿಸಬೇಕು. ನೇಮಕಾತಿ ಸಮಿತಿಯು ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಮೊದಲು, ನೇಮಕಾತಿ ಪ್ರಾಧಿಕಾರವು ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಯನ್ನು ಯಾವುದೇ ಸಮಯದಲ್ಲಿ ಬದಲಾಯಿಸಬಹುದು.

3. **ಅರ್ಜಿ ಆಹ್ವಾನಿಸುವಿಕೆ:-** ನೇಮಕಾತಿ ಸಮಿತಿಯು, ಅರ್ಹತಾ ಷರತ್ತುಗಳು, ಅನ್ವಯವಾಗುವ ಆಯ್ಕೆ ವಿಧಾನ, ತಾಂತ್ರಿಕ ಅಥವಾ ತಾಂತ್ರಿಕೇತರ ಹುದ್ದೆಯ ಸ್ವರೂಪ, ಭರ್ತಿ ಮಾಡಬೇಕಾದ ತಾತ್ಕಾಲಿಕ ಸಂಖ್ಯೆಯ ಖಾಲಿ ಹುದ್ದೆಗಳ ಕುರಿತು ಕರ್ನಾಟಕ ರಾಜ್ಯಪತ್ರದಲ್ಲಿ ಜಾಹೀರಾತು ನೀಡುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಮತ್ತು ರಾಜ್ಯದ ಮೀಸಲಾತಿ ನಿಯಮಗಳನ್ವಯ ಅವುಗಳ ವರ್ಗೀಕರಣ. ಅಂತಹ

ಜಾಹೀರಾತಿನ ಸಾರಾಂಶವನ್ನು ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕವಾಗಿ ಪ್ರಸಾರವಾಗುವ ಒಂದಕ್ಕಿಂತ ಹೆಚ್ಚು ದಿನಪತ್ರಿಕೆಗಳಲ್ಲಿ ಮತ್ತು ಅದು ಸೂಕ್ತವೆಂದು ಪರಿಗಣಿಸಬಹುದಾದ ಇತರ ಪ್ರಕಟಣೆಯ ಮಾಧ್ಯಮಗಳಲ್ಲಿ ಪ್ರಕಟಿಸಬೇಕು.

4. **ಆಯ್ಕೆ ವಿಧಾನ:-** ನೇಮಕಾತಿ ಸಮಿತಿಯು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ಎಲ್ಲಾ ಪತ್ರಿಕೆಗಳಲ್ಲಿ ಗಳಿಸಿದ ಸರಾಸರಿ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ ಆಯ್ಕೆ ವಿಧಾನವನ್ನು ಮಾಡಲಾಗುತ್ತದೆ.

5. **ಅರ್ಹ ಅಭ್ಯರ್ಥಿಗಳ ಪಟ್ಟಿ:-** (1) ನೇಮಕಾತಿ ಸಮಿತಿಯು ಅರ್ಹತೆಯ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳ ಹೆಸರುಗಳ ಪಟ್ಟಿಯನ್ನು ಈ ಕೆಳಗಿನ ರೀತಿಯಲ್ಲಿ ನಿರ್ಧರಿಸುತ್ತದೆ, ಅವುಗಳೆಂದರೆ:-

1. **ಅಧೀಕ್ಷಕರು(ಕಾರ್ಯನಿರ್ವಾಹಕ), ಭೂಮಾಪನ ಪರ್ಯಾವೇಕ್ಷಕರು ಮತ್ತು ಭೂಮಾಪಕರಿಗೆ ಸಂಬಂಧಿಸಿದಂತೆ:-** ನೇಮಕಾತಿ ಸಮಿತಿಯು ಈ ಕೆಳಗಿನ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುತ್ತದೆ, ಅವುಗಳೆಂದರೆ:-

(ಎ) ಪರೀಕ್ಷೆಯು ವಸ್ತುನಿಷ್ಠ ಬಹು ಆಯ್ಕೆಯ ರೂಪದಲ್ಲಿರಬೇಕು, ತಲಾ 200 ಅಂಕಗಳನ್ನು ಹೊಂದಿರುವ ಎರಡು ಲಿಖಿತ ಪತ್ರಿಕೆಗಳನ್ನು ಒಳಗೊಂಡಿರುತ್ತದೆ, ಅವುಗಳೆಂದರೆ:-

ಪತ್ರಿಕೆ-1:ಸಾಮಾನ್ಯ ಪತ್ರಿಕೆ - ನಿಗದಿತ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಪ್ರಚಲಿತ ಘಟನೆಗಳು, ಸಾಮಾನ್ಯ ವಿಜ್ಞಾನಗಳು ಮತ್ತು ದೈನಂದಿನ ವೀಕ್ಷಣೆ ಮತ್ತು ಪ್ರಾಯೋಗಿಕ ಜ್ಞಾನದ ವಿಷಯಗಳಿಗೆ ಸಂಬಂಧಿಸಿದ ವಿಷಯಗಳ ಸಾಮಾನ್ಯ ಜ್ಞಾನವನ್ನು ಒಳಗೊಂಡಿದೆ.

ಪತ್ರಿಕೆ-II: ನಿರ್ದಿಷ್ಟ ಪತ್ರಿಕೆ -ಈ ಪತ್ರಿಕೆಯ ವಿಷಯವನ್ನು ನೇಮಕಾತಿ ಸಮಿತಿಯು ನಿರ್ಧರಿಸುತ್ತದೆ, ಆಯ್ಕೆ ಮಾಡಲಾಗುತ್ತಿರುವ ಕೆಲಸದ ಸ್ವರೂಪ ಮತ್ತು ನೇಮಕಾತಿ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅರ್ಹತಾ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು.

(ಬಿ) ಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಇರಬೇಕು. ಅಭ್ಯರ್ಥಿಯು ಪತ್ರಿಕೆಗಳಿಗೆ ಸಂಪೂರ್ಣವಾಗಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಉತ್ತರಿಸಬಹುದು ಆದರೆ ಎರಡರಲ್ಲೂ ಅಲ್ಲ.

6. **ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ. –**

"ಅಧೀಕ್ಷಕರು (ಕಾರ್ಯನಿರ್ವಾಹಕ), ಭೂಮಾಪನ ಪರ್ಯಾವೇಕ್ಷಕರುಮತ್ತು ಭೂಮಾಪಕರ" ವಿಷಯದಲ್ಲಿ:

ನೇಮಕಾತಿ ಸಮಿತಿಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡಾವಾರು ಆಧಾರದ ಮೇಲೆ ನಿರ್ಧರಿಸಲಾದ ಅರ್ಹತೆಯ ಆಧಾರದ ಮೇಲೆ ಮತ್ತು ರಾಜ್ಯದ ಮೀಸಲಾತಿ ನಿಯಮಗಳನ್ನು ಪರಿಗಣಿಸಿ ನೇಮಕಾತಿಗೆ ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನ ಅಂಕಗಳನ್ನು ಪಡೆದರೆ, ಅಂತಹ ಅಭ್ಯರ್ಥಿಗಳ ಅರ್ಹತೆಯ ಕ್ರಮವನ್ನು ಅವರ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ, ವಯಸ್ಸಿನಲ್ಲಿ ಹಿರಿಯ ವ್ಯಕ್ತಿಯನ್ನು ಅರ್ಹತೆಯ ಕ್ರಮದಲ್ಲಿ ಉನ್ನತ ಸ್ಥಾನದಲ್ಲಿ ಇರಿಸಲಾಗುತ್ತದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಮೇಲಿನ ಉಪ-ವಿಧಿ (1) ಮತ್ತು (2) ರ ಅಡಿಯಲ್ಲಿ ಸಿದ್ಧಪಡಿಸಲಾದ ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಮತ್ತು ನೇಮಕಾತಿ ಸಮಿತಿಯು ಸೂಕ್ತವೆಂದು ಭಾವಿಸಬಹುದಾದ ಇತರ ಮಾಧ್ಯಮಗಳಲ್ಲಿ ಮತ್ತು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದ ರೀತಿಯಲ್ಲಿ ಪ್ರಕಟಿಸಬೇಕು ಮತ್ತು ಅದರ ಪ್ರತಿಯನ್ನು ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸಬೇಕು. ನೇಮಕಾತಿ ಸಮಿತಿಯು ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಆಯ್ಕೆಯ ಸಂಗತಿಯನ್ನು ತಿಳಿಸಬೇಕು.

7. **ಅಭ್ಯರ್ಥಿಗಳ ನೇಮಕಾತಿ:-**

(1) ನೇಮಕಾತಿ ಸಮಿತಿಯು ಷರತ್ತು (6) ರ ಅಡಿಯಲ್ಲಿ ಸಿದ್ಧಪಡಿಸಿದ ಆಯ್ಕೆ ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸಲಾಗಿರುವ ಅಭ್ಯರ್ಥಿಗಳನ್ನು, ಕರ್ನಾಟಕ ನಾಗರೀಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 2021 ರ ನಿಬಂಧನೆಗಳಿಗೆ ಅನುಸಾರವಾಗಿ ಅಂತಹ ಪ್ರತಿಯೊಬ್ಬ ಅಭ್ಯರ್ಥಿಯ ಸೂಕ್ತತೆ ಮತ್ತು ದೈಹಿಕ ಸದೃಢತೆಯ ಬಗ್ಗೆ ಸ್ವತಃ ಮನವರಿಕೆ ಮಾಡಿಕೊಂಡ ನಂತರ, ನೇಮಕಾತಿ ಪ್ರಾಧಿಕಾರವು ಆಯ್ಕೆ ಪಟ್ಟಿಯಲ್ಲಿ ಅವರ ಹೆಸರುಗಳು ಕಾಣಿಸಿಕೊಳ್ಳುವ ಕ್ರಮದಲ್ಲಿ ನೇಮಕ ಮಾಡಬಹುದು.

(2) ಷರತ್ತು 6 ರ ಉಪ-ಖಂಡ (3) ರ ಅಡಿಯಲ್ಲಿ ಪ್ರಕಟಿಸಲಾದ ಯಾವುದೇ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಸೇರಿಸುವುದರಿಂದ ಅಭ್ಯರ್ಥಿಗೆ ಯಾವುದೇ ನೇಮಕಾತಿ ಹಕ್ಕು ದೊರೆಯುವುದಿಲ್ಲ.

(3) ನೇಮಕಾತಿ ಆದೇಶ ಹೊರಡಿಸಿದ ಪರಿಣಾಮವಾಗಿ ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದರೆ, ಅವನು ಆಯ್ಕೆಯಾದ ಹುದ್ದೆಯನ್ನು ಹೊಸ ಖಾಲಿ ಹುದ್ದೆ ಎಂದು ಪರಿಗಣಿಸಿ ಮುಂದಿನ ಅಥವಾ ನಂತರದ ನೇಮಕಾತಿಯಲ್ಲಿ ಭರ್ತಿ ಮಾಡಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH